ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿ

3132 (3862) : ಶ್ರೀ ಸಭಾಪತಿ ಯು.ಆರ್ (ಉಡುಪಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001–02, 2002–03, 2003–04 ಈ ಸಾಲಿನಲ್ಲಿ ಅಂತರ್ಜಲ ಅಭಿವೃದ್ಧಿಯ ಬಗ್ಗೆ ಸರ್ಕಾರ ತೆಗೆದುಕೊಂಡ ಕಾರ್ಯಕ್ರಮಗಳ ವಿವರಗಳೇನು;

ಆ) ಈ ಮೂರು ವರ್ಷಗಳಿಗೆ ಬಿಡುಗಡೆಯಾದ ಹಣದ ಮೊತ್ತವೆಷ್ಟು; ಜಿಲ್ಲಾವಾರು ವಿವರಗಳನ್ನು ನೀಡುವುದು?

ಶ್ರೀ ವಿ ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) 2001–02ನೇ ಸಾಲಿನಲ್ಲಿ ಅಂತರ್ಜಲ ವೃದ್ಧಿಪಡಿಸುವ ಸಲುವಾಗಿ ಬೆಂಗಳೂರು, ಕೊಪ್ಪಳ, ಚಿತ್ರದುರ್ಗ, ತುಮಕೂರು, ಚಾಮರಾಜನಗರ, ಹಾಸನ, ಬೆಳಗಾವಿ, ಬಳ್ಳಾರಿ, ಕೋಲಾರ ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು 282 ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲಾಗಿದೆ.

2002–03ನೇ ಸಾಲಿನಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿ ಕೋಲಾರ, ಬಳ್ಳಾರಿ, ಕೊಪ್ಪಳ ಮತ್ತು ಬೀದರ್ ಜಿಲ್ಲೆಗಳಲ್ಲಿ ಒಟ್ಟು 457 ಸಣ್ಣ ಕೆರೆ / ಕುಂಟೆ / ಗೋಕಟ್ಟೆ / ಕಲ್ಯಾಣಿಗಳಲ್ಲಿ ಅಂತರ್ಜಲ ಮರು ಪೂರೈಕೆಗಾಗಿ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

2003–04ನೇ ಸಾಲಿನಲ್ಲಿ 72 ಕ್ಲಿಷ್ಟಕರ ತಾಲ್ಲೂಕುಗಳಲ್ಲಿ ಕೂಲಿಗಾಗಿ ಕಾಳು ಯೋಜನೆಯಡಿ ಒಟ್ಟು ರೂ. 216.00 ಲಕ್ಷ ವೆಚ್ಚದಲ್ಲಿ ಸಣ್ಣ ಕೆರೆ/ಕುಂಟೆ/ಗೋಕಟ್ಟೆ/ಕಲ್ಯಾಣಿಗಳಲ್ಲಿ ಅಂತರ್ಜಲ ಮರು ಪೂರೈಕೆಗಾಗಿ ಹೂಳು ತೆಗೆಯುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) ಅಂತರ್ಜಲ ಅಭಿವೃದ್ಧಿಗೆ ಪ್ರತ್ಯೇಕ ಅನುದಾನದ ವ್ಯವಸ್ಥೆ ಇಲ್ಲದ ಪ್ರಯುಕ್ತ ಇಲಾಖೆಗೆ ಅಂತರ್ಜಲ ಸಂಶೋಧನೆ ಹಾಗೂ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಅನುದಾನದಡಿ ಪ್ರಯೋಗಾತ್ಮಕವಾಗಿ ಅಂತರ್ಜಲ ವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ–1

2001–02, 2002–03 ಹಾಗೂ 2003–04ನೇ ಸಾಲಿನ ಜಿಲ್ಲಾವಾರು ವಿವಿಧ ಯೋಜನೆಯಡಿ ಖರ್ಚು ಮಾಡಲಾದ / ಉದ್ದೇಶಿತ ಮೊತ್ತ ವಿವರ

ಕ್ರ. ಸಂ.	ಯೋಜನೆ/ಜಿಲ್ಲೆ	ವರ್ಷ		
		2001–02 (ರೂ.ಲಕ್ಷಗಳಲ್ಲಿ)	2002–03 (ರೂ.ಲಕ್ಷಗಳಲ್ಲಿ)	2003–04 (ಉದ್ದೇಶಿತ ಮೊತ್ತ) (ರೂ. ಲಕ್ಷಗಳಲ್ಲಿ)
1	ಪ್ರ.ಮಂ.ಗ್ರಾ.ಯೋ			
1	ಬೀದರ್	24.00	–	–

1	2	3	4	5
2	ಬೆಳಗಾಂ	8.85	–	–
3	ರಾಯಚೂರು	6.67	–	–
4	ಗುಲ್ಬರ್ಗಾ	6.43	–	–
5	ಮಂಡ್ಯ	6.00	–	–
6	ಹಾಸನ	9.47	–	–
	ಒಟ್ಟು	**61.42**	–	–
II	**ಅಂತರ್ಜಲ ಸಂಶೋಧನೆ ಮತ್ತು ಅಭಿವೃದ್ಧಿ**			
1	ಬೆಂಗಳೂರು (ನಗರ)	58.82	–	15.00
2	ಬೆಂಗಳೂರು (ಗ್ರಾಮಾಂತರ)	22.08	–	9.00
3	ಕೊಪ್ಪಳ	9.97	3.17	9.00
4	ತುಮಕೂರು	44.67	–	30.00
5	ಚಿತ್ರದುರ್ಗ	9.98	–	15.00
6	ಚಾಮರಾಜನಗರ	9.55	–	9.00
7	ಬಳ್ಳಾರಿ	4.99	13.84	9.00
8	ಹಾಸನ	10.00	–	6.00
9	ಬೆಳಗಾಂ	19.48	–	24.00
10	ಕೋಲಾರ	36.96	19.00	33.00
11	ಬೀದರ್	10.58	.25	6.00
12	ಶಿವಮೊಗ್ಗ	–	–	–
13	ಬೆಳಗಾಂ	–	–	–
14	ಬಿಜಾಪುರ	–	–	18.00
15	ದಕ್ಷಿಣ ಕನ್ನಡ	–	–	12.00
16	ದಾವಣಗೆರೆ	–	–	6.00
17	ಬಾಗಲಕೋಟೆ	–	–	3.00
18	ಹಾವೇರಿ	–	–	9.00
19	ಗದಗ	–	–	3.00
	ಒಟ್ಟು	**237.08**	**37.26**	**216.00**
	ಒಟ್ಟು ಮೊತ್ತ	**298.50**	**37.26**	**216.00**

ಮೈಸೂರು ಜಿಲ್ಲೆಯಲ್ಲಿ ಕೈಗಾರಿಕಾ ಉದ್ದೇಶಗಳ ಜಮೀನಿನ ಪರಿಹಾರ

3133 (3620) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಜಿಲ್ಲೆಯಾದ್ಯಂತ ಕೈಗಾರಿಕಾ ಉದ್ದೇಶಗಳಿಗೆ ಸ್ವಾಧೀನ ಪಡಿಸಿಕೊಂಡ ಜಮೀನು ವಿಚಾರದಲ್ಲಿ ಪರಿಹಾರ ಬಾಕಿ ಇರುವ ಪ್ರಕರಣಗಳು ಯಾವುವು?